**ದಿ: 22-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಎಮ್ ಡಿ ಕೆ ವಕೀಲರಿಂದ:**

1. ನಿಮ್ಮ ಮನೆಯ ಮುನ್ಸಿಪಾಲ್ಟಿ ನಂಬರ್ ಏನಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ಪ್ರತಿವಾದ ಪತ್ರದ ಪ್ಯಾರಾ ನಂಬರ್ 3 ರಲ್ಲಿ ಪ್ರತಿವಾದಿ ನಂಬರ್ 3 ಆಗಿರುವ ನನ್ನ ತಮ್ಮ ಖಾಲಿ ಜಾಗದ ಮಾಲೀಕನಾಗಿರುವುದು ಬರೆಸಿರುವುದು ಸರಿಯಾಗಿದೆ. 3ನೇ ಪ್ರತಿವಾದಿಗೆ ಖಾಲಿ ಜಾಗ ಹೇಗೆ ಬಂದಿದೆ ಎಂದರೆ ಮುನ್ಸಿಪಾಲ್ಟಿ ಜಾಗ ಆಗಿದ್ದು ನಮ್ಮ ಹಿರಿಯರಿಂದ ಬಂದಿರುತ್ತದೆ. 3ನೇ ಪ್ರತಿವಾದಿಗೆ ಖಾಲಿ ಜಾಗ ಬಂದಿದೆ ಎಂದು ತೋರಿಸಲು ಯಾವ ದಾಖಲಾತಿ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಮುನ್ಸಿಪಾಲ್ಟಿಯ ಖಾತಾ ಉತಾರ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನೀವು ನ್ಯಾಯಾಲಯಕ್ಕೆ ಯಾವುದೇ ಖಾತಾ ಉತಾರ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಅಳಿಯನಾಗಬೇಕು. ನಿಮ್ಮ ಪ್ರತಿವಾದ ಪತ್ರದ ಪ್ಯಾರಾ ನಂಬರ್ 3 ರಲ್ಲಿ 2ನೇ ಪ್ರತಿವಾದಿ ಟಿನ್ ಶೆಡ್ ನ್ನು ಬಾಡಿಗೆದಾರನಾಗಿ ಪಡೆದಿದ್ದಾರೆಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಬಾಡಿಗೆ ಕೊಟ್ಟಿಲ್ಲ ಎನ್ನುತ್ತಾರೆ.

2. ನೀವು ಹಾಕಿಕೊಂಡಿರುವ ಟಿನ್ ಶೆಡ್ ನ ಜಾಗವು ವಾದಿಗೆ ಸೇರಿದ ದಾವಾ ಆಸ್ತಿ ನಂಬರ್ 2/1/62 ರ ಭಾಗವಾಗಿದೆ ಎಂದರೆ ಸರಿಯಲ್ಲ. ನಿ ಡಿ -1 ಇ ಸ್ವತ್ತು ಖಾತಾ ದಲ್ಲಿರುವ ಛಾಯಾ ಚಿತ್ರದಲ್ಲಿರುವ ಮನೆ ನನಗೆ ಸೇರಿರುತ್ತದೆ. ಅದರಲ್ಲಿ ನಿಮ್ಮ ಮನೆಯ ನಂಬರ್ 2-1-81/3 ಎಂದು ಬರೆದಿದ್ದಾರೆಂದರೆ ಸರಿ. ನ ಇ ಡಿ 21 ರಿಂದ 23 ನೀವು ಹಾಜರುಪಡಿಸಿದ ದಾಖಲೆಗಳು ಮನೆಗೆ ಸಂಬಂಧಿಸಿದ ದಾಖಲೆಗಳು ಆಗಿರುತ್ತವೆ ಟಿನ್ ಶೆಡ್ ಗೆ ಸಂಬಂಧಿಸಿದ ದಾಖಲಾತಿಗಳು ಆಗಿರುವುದಿಲ್ಲ ಎಂದರೆ ಹೌದು ಎನ್ನುತ್ತಾರೆ. ನಿಮ್ಮ ಮನೆಯ ಮುಂದೆ ಟಿನ್ ಶೆಡ್ ಇರುವ ಜಾಗೆ ನಿಮಗೆ ಮತ್ತು

ಪ್ರತಿವಾದಿಯರಿಗೆ ಸೇರಿದ ಜಾಗ ಆಗಿರುವುದಿಲ್ಲ ಅದು ವಾದಿಯ ಜಾಗದ ಭಾಗವಾಗಿದೆ ಎಂದರೆ ಸರಿಯಲ್ಲ. ವಾದಿ ಕ್ರಯಪತ್ರ, ಮುಟೇಶನ್ ಮತ್ತು ಕಟ್ಟಡ ಪರವಾನಿಗೆ ದಾಖಲಾತಿಗಳನ್ನು ಪಡೆದುಕೊಂಡು ಅವರ ಆಸ್ತಿ ಅವರಿಗೆ ಸೇರಿದೆ ಆದರೂ ನಿಮಗೆ ಸೇರಿದ ಜಾಗೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಟಿನ್ ಶೆಡ್ ಹಾಕಿರುವ ಜಾಗ ಮುನ್ಸಿಪಾಲ್ಟಿಗೆ ಸೇರಿದ ಜಾಗ ಎಂದು ತೋರಿಸಲು ಏನಾದರೂ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿಲ್ಲ ಎನ್ನುತ್ತಾರೆ. ವಾದಿ ನಿಮಗೆ ವಕೀಲರ ಮೂಲಕ ನೋಟಿಸು ಕಳುಹಿಸಿದ್ದಾರೆ ಎಂದರೆ ಅದು ನನಗೆ ಸಿಕ್ಕಿಲ್ಲ ಎನ್ನುತ್ತಾರೆ. ಆ ನೋಟಿಸ್ ಗೆ ನೀವು ಉತ್ತರ ಕೊಟ್ಟಿಲ್ಲ ಎಂದರೆ ನನಗೆ ನೋಟಿಸ್ ಕೊಟ್ಟಿಲ್ಲ ಎನ್ನುತ್ತಾರೆ. ನೀವು ವಾದಿಗೆ ಸೇರಿದ ಖುಲ್ಲಾ ಜಾಗವನ್ನು ಅನಧಿಕ್ರತವಾಗಿ ಕಬ್ಜಾ ಮಾಡಿದ್ದೀರಿ ಎಂದರೆ ಸರಿಯಲ್ಲ. ಟಿನ್ ಶೆಡ್ ನ್ನು ಅನಧಿಕ್ರತವಾಗಿ ವಾದಿಗೆ ಸೇರಿದ ಜಾಗದಲ್ಲಿ ಹಾಕಜಿರುವುದರಿಂದ ಅದನ್ನು ಕಾನೂನು ಪ್ರಕಾರ ತೆರವುಗೊಳಿಸಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ